ಕೊಳಕು ಬಟ್ಟೆ ಹಾಸಿಕೊಂಡು ತಲೆ ಬಾಚದೆ, ಸ್ನಾನವಿಲ್ಲದೆ ಕೂತಿದ್ದಳು. ಇನ್ನಿವಳು ಒಳ ಹೋಗಿ ನೋಟ್ಸ್ ಅಂತು ತರಲಾರಳು. ಸಾಲದ್ದಕ್ಕೆ ಬಾಗಿಲಲ್ಲೇ ಪಹರೆಗೆ ಕೂತಿದ್ದ ಅವಳಜ್ಜಿ. ಅವಳ ಸಪ್ಪೆ ಮೋರೆ ನೋಡಿ ಏನೊಂದು ಮಾತಾಡದೆ ಮನೆಗೋಡಿ ಬಂದವಳೆ ಅಮ್ಮನನ್ನು ಕೇಳಿದ್ದ ಮೊದಲ ಪ್ರಶ್ನೆಯೆಂದರೆ, “ನಾನು ದೊಡ್ಡವಳಾದ ಮೇಲೆ ನೀವೂ ನನ್ನನ್ನು ಪ್ರತೀ ತಿಂಗಳೂ ಹೀಗೆ ಹೊರಗೆ ಕೂರಿಸುತ್ತೀರಾ?” ಎಂದು. ಕೇಳುವಾಗ ಧ್ವನಿ ಅದುರಿದ್ದು ಕಣ್ಣಂಚಿನಲ್ಲಿ ಜಿನುಗಿದ್ದು ಈಗಲೂ ನೆನಪಿದೆ. ಸದ್ಯ ಅಮ್ಮ ಇಲ್ಲ ಎಂದಿದ್ದಳು.

ಒನ್ ಫೈನ್ ಡೇ... ನಾನೂ ಕಾಣೆಯಾಗುವ ದಿನ ಬಂದುಬಿಟ್ಟಿತು. ಅಂದು ಶುಕ್ರವಾರ. ನನ್ನ ಒಳ ವಸ್ತ್ರ ಕೆಂಪಾಗಿತ್ತು. ಎಂಥದೋ ಗಾಬರಿ ನೋವು, ಸಂಕಟ, ಅವಮಾನ... ಏನು ಮಾಡಲಿ ಈಗ? ಯಾರಲ್ಲಿಯೂ ಹೇಳಿಕೊಳ್ಳಲಾಗದೆ ಒದ್ದಾಡಿದೆ. ಅವತ್ತು ಅದನ್ನು ಯಾರಲ್ಲಿಯೂ ಹೇಳಿಕೊಳ್ಳಲಿಲ್ಲ. ಒಂಟಿಯಾಗಿ ತೊಳಲಾಡಿದೆ. ಮರುದಿನ ಶನಿವಾರ ಶಾಲೆಗೆ ಎಂದಿನಂತೆ ಹೋದೆ. ಒಳಗೆ ಆಗುತ್ತಿದ್ದ ರಕ್ತಸ್ರಾವ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಅಂದು ಪರಿತಪಿಸಿದ ಗಳಿಗೆ ಮತ್ತೆಂದೂ ಜೀವನದಲ್ಲಿ ಬರಲಿಲ್ಲ. ಮನೆಗೆ ಬರುವ ಹೊತ್ತಿಗೆ ಯೂನಿಫಾರ್ಮ್ ಮೇಲೆ ಒಂದೆರೆಡು ಕೆಂಪು ಕಲೆಗಳಾಗಿದ್ದವು. ಈಗ ಅನಿವಾರ್ಯವಾಗಿ ಅಮ್ಮನ ಬಳಿ ಬಂದು “ಇದ್ಯಾಕೋ ಹೀಗಾಗಿದೆ ಅಮ್ಮ” ಎಂದು ತೋರಿಸಿದ್ದೆ. ಅವಳು ಒಂದು ಕ್ಷಣ ಚಲನೆ ಕಳೆದುಕೊಂಡಳು. ಮಗಳು ಋತುಮತಿಯಾದದ್ದನ್ನು ತಾಯಿಯಾದವಳು ಮೊದಲು ನೋಡಬಾರದಂತೆ. ನನಗದು ಗೊತ್ತಿರಲಿಲ್ಲ. ಆದರೆ ನಾನು ಹೋಗಿ ಅವಳಿಗೆ ತೋರಿಸಿದೆ ಅಂತ ಕೋಪಮಾಡಿಕೊಂಡಳು ಅಮ್ಮ.

ನನ್ನ ಹೊಚ್ಚ ಹೊಸ ಕೇಸರಿ ಪೆಟ್ಟಿಕೋಟಿನಲ್ಲಿ ಮೊಟ್ಟಮೊದಲ ಕಲೆ ಮಾಡಿಕೊಂಡಿದ್ದಕ್ಕೆ ಅಮ್ಮ ಅದನ್ನು ಅಗಸರ ಸುವರ್ಣಂಗೆ ಕೊಟ್ಟರು. ಅವತ್ತೆಲ್ಲ ಎಷ್ಟು ಅತ್ತಿದ್ದೆ. ಹನ್ನೆರಡರ ಅಂಚಿಗೆ ಆಗಿಬಿಟ್ಟೆನೆಂದು ಅಮ್ಮನೂ ಅತ್ತಿದ್ದಳು. ಯಾಕೆ ಅಮ್ಮಂದಿರೆಲ್ಲ ತಮ್ಮ ಹೆಣ್ಣುಮಕ್ಕಳು ಋತುಮತಿಯರಾದಾಗ ಅಳುತ್ತಾರೆ?! ಮರುದಿನ ಮುತ್ತೈದೆಯರನ್ನು ಕರೆದು ಗುಟ್ಟಾಗಿ ತಲೆ ಮೇಲೆ ಹಾಲು ತುಪ್ಪ ಎರೆಸಿ ಸ್ನಾನ ಮಾಡಿಸಿ ಆರತಿ ತೆಗೆಸಿದ್ದಳು. ಮತ್ತೆ ಈ ವಿಷಯ ಈಗಲೇ ಬಹಿರಂಗವಾಗುವುದು ಬೇಡ ಎಂದಳು. ಅಂದಿನಿಂದ ಪ್ರತಿ ತಿಂಗಳೂ ಆ ಮೂರು ದಿನದ ವನವಾಸ ಯಾರಿಗೂ ಬೇಡ. ಗುಟ್ಟಾಗಿ ಬೇರೆ ಅನುಭವಿಸಬೇಕಿತ್ತು.

ಯಾರೋ ಕೆಲವರು ಮದುವೆಯ ವಯಸ್ಸಾಗುತ್ತಿದ್ದರೂ ಕೂರದಿದ್ದಾಗ ಗಾಬರಿಪಟ್ಟುಕೊಳ್ಳುವುದುಂಟು. ಈ ಇಷ್ಟೂ ವರ್ಷಗಳಿಂದಲೂ ಅಮ್ಮಂದಿರ ಈ ಕಣ್ಣೀರು ನಿಂತಿಲ್ಲದೆ ಇರುವುದನ್ನು ನೋಡುವಾಗ ಕಾಲ ಬದಲಾಗುತ್ತಿದೆಯಲ್ಲವಾ? ಹಲವಾರು ಟ್ಯಾಬ್ಲೆಟ್ಟುಗಳು, ಸ್ಯಾನಿಟರಿ ನ್ಯಾಪ್ಕಿನ್ನುಗಳು, ಎಷ್ಟೆಲ್ಲಾ ಬದಲಾವಣೆಯ ಹೊಸಗಾಳಿ. ಆದರೆ ಹೆಣ್ಣೇಕೆ ಈ ಕಾರಣಕ್ಕೇ ನೋಯುತ್ತಾಳೆ? ಕುಟುಂಬ ಮತ್ತು ಸಮಾಜವೆರಡೂ ಯಾಕೆ ಅವಳಿಗೊಂದು ನಿರಾತಂಕ ಭಯಮುಕ್ತ ವಾತಾವರಣವನ್ನು ಕಲ್ಪಿಸಿಕೊಡುವಲ್ಲಿ ಸೋಲುತ್ತಿವೆ?

ನಂತರದ ದಿನಗಳು ನಿಜಕ್ಕೂ ಪರಿವರ್ತನೆಯ ಸಮಯವೆಂದೇ ಹೇಳಬೇಕು. ನನ್ನೊಳಗಿನ ನಾನು ಕಳೆದು ಹೋಗಿ ಮತ್ತೊಂದೇ ರೂಪ ಪಡೆದಂತೆ. ಮಂಡಿ ಮೇಲಿನ ಬಟ್ಟೆಗಳೆಲ್ಲ ಪೆಟ್ಟಿಗೆ ಸೇರಿದವು. ಮೈಕಾಣುವ ಬಟ್ಟೆಗಳು ಬೇರೆಯವರ ಪಾಲಾದವು. ಕತ್ತಲಾಗುವ ಮುಂಚೆ ಮನೆಗೆ ಬಾ, ಎಲ್ಲೆಲ್ಲೋ ತಿರ್ಗೋಕೆ ಹೋಗ್ಬೇಡ, ಅಲ್ಲಿ ಹೋಗ್ಬೇಡ ಇಲ್ಲಿ ಹೋಗ್ಬೇಡ... ಎಲ್ಲ ನಿಯಮಗಳೂ ಒಮ್ಮೆಲೇ ಎದ್ದು ಕೂತವು. ನನ್ನೊಳಗಿನ ಗಟ್ಟಿ ನಗು ಧ್ವನಿ ಕಳೆದುಕೊಳ್ಳತೊಡಗಿತು. ಯಾರ ಮುಂದೆಯೂ ಗಹಗಹಿಸಿ ನಗುವಂತಿಲ್ಲ. ವಿಪರೀತ ಅಲಂಕಾರಕ್ಕೂ ಕತ್ರಿ. ಪಕ್ಕದ ಮನೆಗೆ